**ದಿನಾಂಕಃ 03.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

2005 ನೇ ಇಸವಿಯಿಂದ ನಾನು ಕ್ಯಾಟರಿಂಗ್ ವ್ಯವಹಾರ ಮಾಡಿ ನಾನು ಜೀವನ ನಿರ್ವಹಣೆ ಮಾಡುತ್ತಿದ್ದೆ, ಸಾಕ್ಷಿ ಮುಂದುವರೆದು ಕಟ್ಟಡವನ್ನು ಬಾಡಿಗೆಗೆ ನೀಡಿದ್ದು ಅದರಿಂದ ತಿಂಗಳಿಗೆ 60 ಸಾವಿರ ರೂ. ಆದಾಯವಿದೆ. ನನಗೆ ಕ್ಯಾಟರಿಂಗ್ ಬಿಸಿನೆಸ್ ನಿಂದ ವಾರ್ಷಿಕ 2 ರಿಂದ 3 ಲಕ್ಷ ಆದಾಯವಿದೆ. ನಮ್ಮ ಕಟ್ಟಡದಲ್ಲಿ 5 ರಿಂದ 6 ಮಳಿಗೆಗಳಿದ್ದು ಅವುಗಳನ್ನು ಹೋಟೆಲ್ ಹಾಗೂ ಕಚೇರಿಗಳಿಗೆ ಬಾಡಿಗೆ ನೀಡಿರುತ್ತೇನೆ. 2010-2011 ನೇ ಇಸವಿಯಲ್ಲಿ ತಿಂಗಳಿಗೆ 60 ಸಾವಿರ ರೂ. ಬಾಡಿಗೆ ಪಡೆಯುತ್ತಿದ್ದೆನು, ಈಗ ಅದಕ್ಕು ಹೆಚ್ಚು ಬಾಡಿಗೆ ಪಡೆಯುತ್ತಿದ್ದೇನೆ ಎಂದರೆ ರೂ.1,20,000/- ಬಾಡಿಗೆ ಪಡೆಯುತ್ತಿದ್ದೆನು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**2.** ನಾನು ಆದಾಯ ತೆರಿಗೆ ಪಾವತಿ ವರದಿಯನ್ನು ಕಟ್ಟಡದಿಂದ ಪಡೆಯುತ್ತಿದ್ದ ಆದಾಯವನ್ನು ಸಹ ನಮೂದಿಸಿಕೊಂಡಿರುತ್ತೇನೆ. ಆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನೀವು ನಿಮ್ಮ ಪಿರ್ಯಾದಿನಲ್ಲಿ 45 ಲಕ್ಷ ರೂ. ಗಳನ್ನು ಆರೋಪಿಗೆ ನೀಡಿದ್ದೇನೆ ಎಂದು ನಮೂದಿಸಿದ್ದೀರಿ ಯಾವ ವರ್ಷ ಆ ಹಣವನ್ನು ನೀಡಿದ್ದೀರಿ ಎಂದರೆ ಸಾಕ್ಷಿಯು 2010 ನೇ ಇಸವಿಯಿಂದ ನವೆಂಬರ್ 2018 ನೇ ಇಸವಿಯವರೆಗೂ ಆರೋಪಿಗೆ ಹಣ ನೀಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನನ್ನ ಆದಾಯ ತೆರಿಗೆ ಪಾವತಿ ವರದಿಯಲ್ಲಿ ನಮೂದಿಸಿಕೊಂಡಿರುವುದಿಲ್ಲ. ಈ ವಿಷಯವನ್ನು ನೋಟೀಸಿನಲ್ಲಾಗಲೀ, ಪಿರ್ಯಾದಿನಲ್ಲಾಗಲೀ ಅಥವಾ ಪ್ರಮಾಣ ಪತ್ರಿಕೆಯಲ್ಲಾಗಲೀ ನಮೂದಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನೋಟೀಸಿನಲ್ಲಿ ನಮೂದಿಸಿರುತ್ತೇನೆ ಎಂದು

ನುಡಿಯುತ್ತಾರೆ. ಯಾವ ಯಾವ ದಿನಾಂಕದಂದು ಯಾವ ಮುಖಬೆಲೆಯ ನೋಟುಗಳನ್ನು ಆರೋಪಿಗೆ ನೀಡಿರುತ್ತೀರಿ ಎಂದು ನೋಟೀಸಿನಲ್ಲಾಗಲೀ, ಪಿರ್ಯಾದಿನಲ್ಲಾಗಲೀ ಅಥವಾ ಪ್ರಮಾಣ ಪತ್ರಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ದಿನಾಂಕಗಳಂದು ಹಣ ನೀಡಿರುತ್ತೇನೆ ಎಂದು ನನಗೆ ಈಗ ನಿರ್ದಿಷ್ಟ ದಿನಾಂಕಗಳನ್ನು ಹೇಳಲಾಗುವುದಿಲ್ಲ. ಆರೋಪಿಗೆ ಹಣವನ್ನು ನಗದು ಮುಖಾಂತರ ನೀಡಿದೆನು. ಆರೋಪಿಗೆ ಯಾವ ಸ್ಥಳದಲ್ಲಿ ಹಣ ನೀಡಿರುತ್ತೀರಿ ಎಂದರೆ ಆರೋಪಿ ಎಂಟು ವರ್ಷಗಳ ಅವಧಿಯಲ್ಲಿ ಅನೇಕ ಬಾರಿ ನನ್ನಿಂದ ಹಣ ಕೇಳಿ ಪಡೆದುಕೊಂಡಿರುತ್ತಾರೆ, ಹಾಗಾಗಿ ನಿರ್ದಿಷ್ಟ ಸ್ಥಳ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಸುಮಾರು 12 ವರ್ಷಗಳಿಂದ ಸ್ನೇಹಿತರಾಗಿರುತ್ತಾರೆ. ಯಾವ ನಿರ್ದಿಷ್ಟ ಸ್ಥಳದಲ್ಲಿ ಆರೋಪಿಗೆ ಹಣ ನೀಡಿರುತ್ತೇನೆ ಎಂದು ನೋಟೀಸಿನಲ್ಲಾಗಲೀ, ಪಿರ್ಯಾದಿನಲ್ಲಾಗಲೀ ಅಥವಾ ಪ್ರಮಾಣ ಪತ್ರಿಕೆಯಲ್ಲಾಗಲೀ ನಮೂದಿಸಿಕೊಂಡಿರುವುದಿಲ್ಲ ಎಂದರೆ ಸರಿ.

**3.** ದಿ.06.08.2019 ರಂದು ಮಲ್ಲೇಶ್ವರಂನ 16ನೇ ಅಡ್ಡರಸ್ತೆಯ ಅಡಿಗಾಸ್ ಹೋಟೆಲ್‌ನಲ್ಲಿ ಸಂಜೆ 4.00 ಗಂಟೆ ಸಮಯದಲ್ಲಿ ಆರೋಪಿ ನನಗೆ ಚೆಕ್ಕು ನೀಡಿದರು. ಆರೋಪಿ ಚೆಕ್ಕನ್ನು ನೀಡುವ ವೇಳೆಯಲ್ಲಿ ಆನಂದ ಮತ್ತು ರಾಘವ ಎಂಬುವವರು ಇದ್ದರು. ಈ ಮೇಲ್ಕಂಡ ವಿಷಯವನ್ನು ನೋಟೀಸಿನಲ್ಲಾಗಲೀ, ಪಿರ್ಯಾದಿನಲ್ಲಾಗಲೀ ಅಥವಾ ಪ್ರಮಾಣ ಪತ್ರಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿ. ಅದನ್ನು ನಮೂದಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿ ಎರಡು ದಿನಗಳಲ್ಲಿ ಚೆಕ್ಕನ್ನು ಹಾಜರುಪಡಿಸಿಕೊಳ್ಳಿ ಎಂದು ಚೆಕ್ಕನ್ನು ನೀಡಿದ್ದರು, ಆ ಕಾರಣ ದಿ.09.08.2019 ರಂದು ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದೆನು. ನಿ.ಪಿ.1 ರಲ್ಲಿನ ಸಹಿ ಆರೋಪಿಯದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು 054154 ಸಂಖ್ಯೆಯ ಚೆಕ್ಕನ್ನು ನೀಡಿದ್ದರು. ಯಾವ ರೀತಿ ಲೆಕ್ಕಾಚಾರದಲ್ಲಿ ನೀವು ಆರೋಪಿ 45 ಲಕ್ಷ ರೂ.ಗಳನ್ನು ಪಡೆದುಕೊಂಡಿರುತ್ತಾರೆ ಎಂದು ಹೇಳುತ್ತೀರಿ ಎಂದರೆ ಸಾಕ್ಷಿಯು ಎಂಟು ವರ್ಷಗಳಲ್ಲಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಯಾವ ವರ್ಷ ನಿಮ್ಮಿಂದ ಎಷ್ಟೆಷ್ಟು ಹಣ ಪಡೆದುಕೊಂಡರು ಎಂದು ನಿಮ್ಮ ತೆರಿಗೆ ಪಾವತಿ ವರದಿಯಲ್ಲಿ ನಮೂದಿಸಿದ್ದೀರಾ ಎಂದರೆ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಿಮ್ಮ Chartered Accountant ಗೆ ಹೇಳಿದ್ದೀರಾ ಎಂದರೆ ಹೇಳಿರುವುದಿಲ್ಲ. ಚೆಕ್ಕನ್ನು ಹಾಜರುಪಡಿಸುವ ಹಾಗೂ ಹಿಂತಿರುಗಿರುವ ಬಗ್ಗೆ ತೆರಿಗೆ ಪಾವತಿ ವರದಿಯಲ್ಲಿ ನಮೂದಿಸಿರುವುದಿಲ್ಲ. ಯಾವ ಕಾರಣಕ್ಕಾಗಿ ನೀವು ತೆರಿಗೆ ಪಾವತಿ ವರದಿಯಲ್ಲಿ ಆರೋಪಿಗೆ ಹಣ ನೀಡಿರುವ ಬಗ್ಗೆ ನಮೂದಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಯಾವ ಕಾರಣಕ್ಕಾಗಿ ನಮೂದಿಸಿಕೊಳ್ಳಬೇಕು ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

**4.** ಯಾವ ರೂಪದ ಸಾಲ ಎಂದು ಆರೋಪಿಗೆ ನೀಡಿದ್ದೀರಿ ಎಂದರೆ ಸಾಕ್ಷಿಯು ಆರೋಪಿಯ ಕಾರು ಅಪಘಾತವಾಗಿತ್ತು, ಆ ಕಾರಣ ಆರೋಪಿ ಹಣ ಕೇಳಿದರು ನಾನು ಹಣ ನೀಡಿದೆನು ಎಂದು ನುಡಿಯುತ್ತಾರೆ. ಆರೋಪಿಗೆ ಹಣ ನೀಡುವ ಸಮಯದಲ್ಲಿ ಯಾರು ಯಾರು ಹಾಜರಿದ್ದರು ಎಂದು ಹೇಳಲು ಸಾಧ್ಯವೇ ಎಂದರೆ ಹೇಳಲು ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ. ನೀವು ಈಗಾಗಲೇ ಬೇರೆ ಬೇರೆ ದಿನಾಂಕಗಳಲ್ಲಿ ಹಣ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತೀರಿ ಅದರಂತೆ ಹಣ ನೀಡಿದ ಪ್ರತಿ ಬಾರಿಯು ಅವರಿಂದ ದಾಖಲೆಗಳನ್ನು ಪಡೆದುಕೊಳ್ಳಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಆರೋಪಿಯನ್ನು 45 ಲಕ್ಷ ರೂ.ಗಳನ್ನು ಹಿಂದಿರುಗಿಸುವಂತೆ ಕೇಳಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು 2018 ಡಿಸೆಂಬರ್ ಹಾಗೂ 2019 ಜನವರಿ ಮಾಹೆಯಲ್ಲಿ ಆರೋಪಿಯನ್ನು ಹಣ ಹಿಂದಿರುಗಿಸುವಂತೆ ಕೇಳಿರುತ್ತೇನೆ.

**5.** ಯಾವ ದಿನಾಂಕದಂದು ಆರೋಪಿ ಮತ್ತು ನೀವು ಎಂ.ಓ.ಯು ದಾಖಲೆಯನ್ನು ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ದಿ.08.02.2019 ರಂದು ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.